Sudarshana — Dr. T. M. A. Pai Abhinandana Grantha. A Felicitation Volume, edited by Adyanadka Krishna Bhat, presented to Dr. T. M. A. Pai on the occasion of his 8oth birthday celebrations on 30th April 1977. Published by Vijaya College Trust, Mulki, South Kanara. Printed at Manipal Power Press, Manipal, India. First edition, 1977 PP. xiv + 646. Art Plates: 25

ವಿಜಯ ಕಾಲೇಜ್ ಟ್ರಸ್ಟ್, ಮುಲ್ಕಿ, ದಕ್ಷಿಣ ಕನ್ನಡ

ಬೆಲೆ: 80 ರೂ.

ಮುದ್ರಕರು:
ಮಣಿಪಾಲ ಪವರ್ ಪ್ರೆಸ್, ಮಣಿಪಾಲ

# ಸ್ವಾತಂತ್ರ್ಯ ಸಮರ - 1837

ಶ್ರೀ ಪಾ. ದೇವರಾವ್

ಕನ್ನಡ ಜಿಲ್ಲೆಯು 1799ರಲ್ಲಿ ಬ್ರಿಟಿಷರ ಕೈಸೇರಿತ್ತು. ಇದರಿಂದ ಜನರಿಗೇನೂ ಸಂತೋಷವಾಗಿರಲಿಲ್ಲ, ಬದಲು ಅತೃಪ್ತಿಯು ಅವರ ಮನಸ್ಸಿನಲ್ಲಿ ಹೊಗೆಯಾಡುತ್ತಿತ್ತು. ಕಂಪೆನಿ ಸರಕಾರದವರು ಜಿಲ್ಲೆಯ ವ್ಯಾಪಾರವನ್ನು ತಮ್ಮ ಕೈಗೆ ತೆಗೆದುಕೊಂಡು, ಉಪ್ಪು, ಹೊಗೆಸೊಪ್ಪು ಮುಖತಾದ ದೈನಂದಿನ ಬಳಕೆಯ ಹಾಗೂ ಅಡಿಕೆ, ಅಕ್ಕಿ, ಒಳ್ಳೆಮೆಣಸು ಮುಂತಾದ ರಫ್ತಿನ ವಸ್ತುಗಳ ಮೇಲೆ ಸುಂಕ ವಿಧಿಸಿದ್ದರು. ಇದರಿಂದ ರಫ್ತಿನ ವಸ್ತುಗಳ ಧಾರಣೆ ಏರಿ ಅವುಗಳು ಜಿಲ್ಲೆಯಲ್ಲೇ ಉಳಿದುವು; ಕೃಷಿಕನ ವರಮಾನ ಕಡಿಮೆಯಾಯಿತು. ಆದರೆ ನಿತ್ಯೋಪಯೋಗಿ ವಸ್ತುಗಳ ಬೆಲೆ ಏರಿ ಅವನ್ನು ಕೊಳ್ಳುವುದು ಸಾಧಾರಣ ರೈತನಿಗೆ ಕಷ್ಟವಾಯಿತು. ಇದೇ ಸಮಯದಲ್ಲಿ ಭೂಕಂದಾಯವನ್ನು ಮೊದಲು ಕೊಡುತ್ತಿದ್ದಂತೆ ಧಾನ್ಯ ರೂಪದಲ್ಲಿ ಸಂದಾಯ ಮಾಡುವುದರ ಬದಲು ಹಣದ ರೂಪದಲ್ಲಿ ಕೊಡಬೇಕೆಂದು ಸರಕಾರದ ಅಪ್ಪಣೆಯಾಯಿತು. ಇದರಿಂದ ರೈತರು ತಮ್ಮ ಉತ್ಪನ್ನಗಳನ್ನು ವರ್ತಕರಿಗೆ ಮಾರಲೇಬೇಕಾಯಿತು. ವರ್ತಕರು ಸ್ವಾಭಾವಿಕವಾಗಿ ಅತಿ ಕಡಿಮೆ ಬೆಲೆಗೆ ರೈತರ ಬೆಳೆಗಳನ್ನು ಕೊಂಡರು. ತೀರ್ವೆ ಕೊಡಲು ಹೆಚ್ಚಿನ ಫಸಲು ಮಾರಿದ ನಂತರ ಉಳಿದುದು ರೈತನ ಕುಟುಂಬ ನಿರ್ವಹಣೆಗೆ ಸಾಲದಾಯಿತು. 1830–1831ರಲ್ಲಿ ರೈತರಲ್ಲಿ ಪ್ರಬಲ ಕೂಟಗಳೆದ್ದು ದಂಗೆಯಾಗುವ ಲಕ್ಷಣ ತೋರಿತು. ರೈತರ ಅತೃಪ್ತಿಯು ಭಾರತದ ಇತಿಹಾಸದ 2ನೇ ಅಸಹಕಾರ ಚಳುವಳಿಗೆ (ಮೊದಲನೆಯದು 1814ರಲ್ಲಿ – ಪಟ್ನಾದಲ್ಲಿ) ದಾರಿಮಾಡಿತು. ವಿದೇಶಿ ಮತ್ತು ಸ್ವದೇಶಿ ಸಿಪಾಯಿಗಳಿಂದ ಅಸಹಕಾರೀ ರೈತ ಮತ್ತು ಅಧಿಕಾರಿಗಳಿಗೆ ಛಡಿ ಏಟು ಕೊಡಿಸಿ ಬ್ರಿಟಿಷರು ಈ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು – ಜನರನ್ನು ಅಂಕೆಗೆ ತಂದೆವು ಎಣಿಸಿಕೊಂಡರು.

ಕೊಡಗಿನಲ್ಲಿ ಬ್ರಿಟಿಷ್ ಆಳ್ವಿಕೆ ದೃಢವಾಗಿ ಬೇರೂರಿತ್ತು. ಹಿಂದಿನ ರಾಜನ ದಿವಾನರಾದ ಬ್ರಾಹ್ಮಣರ ಲಕ್ಷ್ಮೀನಾರಾಯಣಯ್ಯ ಮತ್ತು ಅಪ್ಪಾರಂಡ ಬೋಪು ಈಗಲೂ ದಿವಾನರಾಗಿ ಮುಂದುವರಿದಿದ್ದರು. ಅವರ ವಿಶ್ವಾಸವನ್ನು ಗಳಿಸಲು ಅವರ ಸಂಬಳ ವನ್ನು ಬ್ರಿಟಿಷರು 1834ರ ಮೊದಲಿದ್ದುದಕ್ಕಿಂತ ಹೆಚ್ಚಿಸಿದ್ದರು. ಬೋಪುದಿವಾನ ಮತ್ತು ದಿವಾನ ಚೆಪ್ಪುಡಿರ ಪೊನ್ನಪ್ಪ ಇವರು ಹೊಸ ಆಳರಸರಾದ ಬ್ರಿಟಿಷರಿಗೆ ಸ್ವಾಮಿನಿಷ್ಠೆ ತೋರಿಸಬೇಕೆಂದು ಜನರಿಗೆ ಹೇಳುತ್ತಿದ್ದರು. ಹೀಗಾಗಿ ಅಪರಂಪರ ಸ್ವಾಮಿ ಎಂಬ ರಾಜ್ಯಾಭಿಯೋಗಿಯು ತಾನು ಚಿಕ್ಕವೀರರಾಜನ ದೊಡ್ಡಪ್ಪನಾದ ಅಪ್ಪಾಜಿ ಅರಸರ ಪ್ರಥಮ ಪುತ್ರ ಮತ್ತು ತನಗೆ ನ್ಯಾಯವಾಗಿ ಸಿಂಹಾಸನ ಸಲ್ಲತಕ್ಕುದು ಎಂದು ಜನರೊಡನೆ ಬೆಂಬಲ ಕೇಳಿದಾಗ ಸರಕಾರವು ಅವನನ್ನು ಸುಲಭವಾಗಿ ಸೆರೆಹಿಡಿದು ಬಂಧನದಲ್ಲಿಟ್ಟಿತು. ಬ್ರಿಟಿಷರ ಮನದಲ್ಲಿ ತಮ್ಮ ಭದ್ರತೆಯ ಕುರಿತು ಯಾವ ಶಂಕೆಯೂ ಬರಲಿಲ್ಲ. ಇದು 1836ರಲ್ಲಿ.

ಆದರೂ ಕೊಡಗು, ಕನ್ನಡ ಜಿಲ್ಲೆಗಳಲ್ಲಿ ಬ್ರಿಟಿಷರನ್ನು ಒದ್ದೋಡಿಸುವ ಗುಪ್ತ ಸಂಘಟನೆ ನಡೆಯುತ್ತಿತ್ತು. ಈ ಸಂಘಟನೆಯ ಪ್ರಮುಖ ಕಾರ್ಯಕರ್ತರು – ಅಪರಂಪರ ಸ್ವಾಮಿಯ ಬದಲು ಹೊಸ ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ, ದಿವಾನ ಲಕ್ಷ್ಮೀನಾರಾಯಣಯ್ಯ, ದಿವಾನನ ಅಳಿಯ ಕರಣಿಕ ಸುಬ್ಬಯ್ಯ ಮತ್ತು ದಿವಾನರ ಭಾವ ಕೃಷ್ಣ, ಹುಲಿಕುಂದ ನಂಜೈಯ್ಯ, ಕುಂಬಳೆ ಸುಬ್ಬಯ್ಯ, ಬೀರಣ್ಣ ಬಂಟ, ಕುಕನೂರು ಚೆನ್ನಯ್ಯ, ಗುಡ್ಡೆಮನೆ ಅಪ್ಪಯ್ಯ, ಕೂಜುಗೋಡು ಮಲ್ಲಪ್ಪ ಗೌಡ, ರಾಮಯ್ಯ ಗೌಡ ಮುಂತಾದವರು.

ಈ ಕಾರ್ಯದಲ್ಲಿ ಮೈಸೂರಿನ ಪದಚ್ಯುತ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ಸೇರುವಂತೆ ಅವರ ಬಂಧು ಬಸವಪ್ಪಾಜಿ ಅರಸರ ಮೂಲಕ ಪ್ರಯತ್ನಗಳನ್ನು ಮಾಡಲಾಯಿತು.

ಅಪರಂಪರ ಸ್ವಾಮಿಯು ತಾನು ಅಪ್ಪಾಜಿ ಅರಸನ ಪ್ರಥಮ ಪುತ್ರನೆಂದು ಬಹಿರಂಗಪಡಿಸಿಕೊಂಡಿದ್ದರೆ, ಕಲ್ಯಾಣಸ್ವಾಮಿಯು ದ್ವಿತೀಯ ಪುತ್ರನೆಂದು ಹೇಳಿಕೊಂಡು ಕೊಡಗಿನ ಸಿಂಹಾಸನಕ್ಕೆ ಹಕ್ಕು ಸ್ಥಾಪನೆ ಮಾಡಿಕೊಂಡನು. ಕಲ್ಯಾಣಸ್ವಾಮಿಗೆ ಸಹಾಯ ಮಾಡಬೇಕೆಂದು ಕುಂಬಳೆ ಸುಬ್ಬಯ್ಯ, ನಂಜೈಯ್ಯ ಮತ್ತು ಬೀರಣ್ಣ ಬಂಟರು ಉತ್ತರ ಕೊಡಗಿನಲ್ಲಿ ಸಂಚರಿಸಿದರು. ಇದೇ ಸಮಯದಲ್ಲಿ ಬ್ರಿಟಿಷರ ಮತ್ತು ಕೊಡಗರ ನಡುವಣ ಸಖ್ಯದಲ್ಲಿ ಭಂಗ ತರುವ ಪ್ರಯತ್ನಗಳು ನಡೆದುವು.

ಪೊನ್ನಪ್ಪ ದಿವಾನನ ಹೇಳಿಕೆಯಂತೆ ಕೊಡಗಿನ ಸುಪರಿಂಟೆಂಡೆಂಟನಾದ ಕ್ಯಾಪ್ಟನ್‌ಲೀ ಹಾರ್ಡಿಯು ಕೆಲವು ಮುತ್ಸದ್ದಿಗಳನ್ನು ಕೆಲಸದಿಂದ ವಜಾ ಮಾಡಿದ್ದ. ಆಗ ಲಕ್ಷ್ಮೀನಾರಾಯಣಯ್ಯ ಮತ್ತು ಇತರರ ಪ್ರೋತ್ಸಾಹದಿಂದ ಈ ಮುತ್ಸದ್ದಿಗಳು ತಮ್ಮ ಮೇಲೆ ವಿನಾ ಕಾರಣ ಚಾಡಿ ಹೇಳಿ ಪೊನ್ನಪ್ಪನು ತಮ್ಮನ್ನು ಕೆಲಸದಿಂದ ತೆಗೆಸಿದನೆಂದೂ, ತಮಗೆ ತಿರುಗಿ ಕೆಲಸ ಕೊಡಿಸಬೇಕೆಂದೂ ಕಮಿಶನರರಿಗೆ ಅರ್ಜಿ ಬರೆದುಕೊಂಡರು. ಇವರಿಗೆ ಕೆಲಸ ಸಿಕ್ಕಿದ್ದರೆ ಪೊನ್ನಪ್ಪನಿಗೆ ಅವಮಾನವಾದಂತಾಗುತ್ತಿತ್ತು ಹಾಗೂ ಕೊಡಗರು ಬ್ರಿಟಿಷರಿಗೆ ತಿರುಗಿ ಬೀಳುತ್ತಿದ್ದರು.

ಭೇದೋಪಾಯದ ದ್ವಿತೀಯ ಹೆಜ್ಜೆಯನ್ನು ಲಕ್ಷ್ಮೀನಾರಾಯಣಯ್ಯನು ಕೈಗೊಂಡನು. ಕ್ರಿ. ಶ. 1836ನೇ ಇಸವಿ ದಶಂಬರ 5ರಲ್ಲಿ, ಆದಿನ ಅಪ್ಪಾಜಿ ಅರಸನ ಮಕ್ಕಳ ಕಡೆಯ ಇಬ್ಬರು ಕುದುರೆ ಸವಾರರು ಬಿಸಿಲೆ ಘಾಟಿನ ಕಡೆಗೆ ಹೋದರೆಂದೂ ಕೊಡಗಿನವರೆಲ್ಲರೂ ಅಪ್ಪಾಜಿ ಅರಸನ ಮಕ್ಕಳಿಗೆ ಸಹಾಯ ಮಾಡುವವೆಂದು ಮಾತು ಕೊಟ್ಟಿರುವರೆಂದೂ ಬೇಗನೆ ಕೊಡಗಿನಲ್ಲಿ ಕೊಡಗರ ಸಹಾಯದಿಂದ ಬ್ರಿಟಿಷರ ವಿರುದ್ಧ ದಂಗೆಯಾಗುವುದೆಂದೂ ಲಕ್ಷ್ಮೀನಾರಾಯಣಯ್ಯನು ಲೀ ಹಾರ್ಡಿಗೆ ಹೇಳಿದನು. ಲೀ ಹಾರ್ಡಿಯು ದಿವಾನನ ಮಾತನ್ನು ನಂಬುತ್ತಿದ್ದರೆ ಅವನಿಗೆ ಕೂಡ ದಿವಾನರ ಮೇಲೆ ಅವಿಶ್ವಾಸ ಉಂಟಾಗುತ್ತಿತ್ತು. ಕೊಡಗರ ಸಹಾಯ ಬ್ರಿಟಿಷ್‌ರಿಗೆ ದೊರಕದೆ ದಂಗೆಗೆ ಜಯ ದೊರಕುವ ಸಂಭವ ಹೆಚ್ಚುತ್ತಿತ್ತು. ಆದರೆ ಲೀ ಹಾರ್ಡಿಯು ದಿವಾನನ ಮೇಲೆಯೇ ಸಂಶಯವಿಟ್ಟು ಎಲ್ಲಾ ವಿಷಯಗಳನ್ನೂ ವಿಚಾರಿಸಿ ನೋಡಲಾಗಿ, ಲಕ್ಷ್ಮೀನಾರಾಯಣಯ್ಯನಿಗೂ, ಸುಳ್ಯದಲ್ಲಿದ್ದ ಅವನ ತಮ್ಮ ರಾಮಪ್ಪಯ್ಯನಿಗೂ ನಡೆಯುತ್ತಿದ್ದ ಪತ್ರ ವ್ಯವಹಾರವು ಬಯಲಾಯಿತು. ಬ್ರಿಟಿಷರ ವಿರುದ್ಧ ಒಳಸಂಚೊಂದು ನಡೆಯುತ್ತಿದೆ, ಇವರ ಎಲ್ಲಾ ವಿಷಯಗಳು ದಿವಾನನಿಗೆ ತಿಳಿದಿವೆ ಎಂಬ ಸಂಶಯಕ್ಕೆ ಇದು ಎಡೆಕೊಟ್ಟಿತು. ಆದುದರಿಂದಲೇ ಲೀ ಹಾರ್ಡಿಯು ದಿವಾನನನ್ನು ನಂಬಿ ಕೊಡಗರನ್ನು ದೂರವಿರಿಸುವ ಬದಲು ದಿವಾನನನ್ನೇ ಕೆಲಸದಿಂದ ವಜಾ ಮಾಡಿ ಬಂಧನದಲ್ಲಿಟ್ಟನು.

ಕಲ್ಯಾಣ ಸ್ವಾಮಿಗೂ ತನ್ನ ಪ್ರಚಾರ ಕಾರ್ಯದಲ್ಲಿ ಹೆಚ್ಚು ಯಶಸ್ಸು ದೊರಕಲಿಲ್ಲ. ಕೊಡಗಿನಲ್ಲಿ ಅವನು ಜನ ಬೆಂಬಲ ಗಳಿಸಲು ಸುತ್ತಾಡಿದ. ಆದರೆ ಜನರು ಬ್ರಿಟಿಷರ ವಿರುದ್ಧ ದಂಗೆ ಏಳಲು ಉತ್ಸಾಹ ತೋರಿಸಲಿಲ್ಲ. ಕಲ್ಯಾಣ ಸ್ವಾಮಿಯ ಬಂಧನಕ್ಕೆ ಲೀ ಹಾರ್ಡಿಯು ಸರ್ವಪ್ರಯತ್ನಗಳನ್ನೂ ಮಾಡುತ್ತಿದ್ದ. ಇದರಿಂದ ಕಲ್ಯಾಣ ಸ್ವಾಮಿಯು ರಾಜವಂಶದಲ್ಲಿ ಭಕ್ತಿಯನ್ನು ಇನ್ನೂ ಇಟ್ಟುಕೊಂಡಿದ್ದ ಕೆಲವು ಕೊಡಗರ ಸಹಾಯದಿಂದ ಗುಪ್ತವಾಗಿ ವೈನಾಡಿಗೆ ಪಲಾಯನ ಮಾಡಬೇಕಾಯಿತು. ಅವನು ವೇಷ ಬದಲಾಯಿಸಿಕೊಂಡು ಬೈತೂರಿಗೆ ತಲುಪಿದ. ಇಲ್ಲೇ ಕೊಡಗಿನ ಸಿಪಾಯಿಗಳು ಮಲಬಾರಿನ ಸಿಪಾಯಿಗಳ ಸಹಾಯದಿಂದ ಅವನನ್ನು ಜನವರಿ ತಿಂಗಳ ಆದಿ ಭಾಗದಲ್ಲಿ ಸೆರೆಹಿಡಿದು ಮೈಸೂರಿಗೆ ತೆಗೆದುಕೊಂಡು ಹೋದರು. ಆದರೂ ಸ್ವಾತಂತ್ರ್ಯ ಸಮರದ ಕಾವು ತಗ್ಗಲಿಲ್ಲ – ಹೋರಾಟ ಮುಂದುವರಿಯಿತು. ಇದು ಹೇಗೆ?

ಕ್ರಿ. ಶ. 1845ರ ವರೆಗೆ ಕನ್ನಡ ಜಿಲ್ಲೆಯ ಸಾಧಾರಣ ಎಲ್ಲಾ ದೇವಾಲಯಗಳ ಧರ್ಮಾಧಿಕಾರಿಗಳು ಸ್ಥಾನಿಕ ಬ್ರಾಹ್ಮಣರಾಗಿದ್ದರು. ಹೀಗಾಗಿ ಧಾರ್ಮಿಕ ಭಾವನೆ ಅಧಿಕ ಇರುವ ಜನತೆಯ ಮೇಲೆ ಇವರಿಗೆ ಹೆಚ್ಚಿನ ಪ್ರಭಾವವಿತ್ತು. ದಿವಾನ ಲಕ್ಷ್ಮೀನಾರಾಯಣಯ್ಯನಾದರೂ ಇದೇ ವರ್ಗಕ್ಕೆ ಸೇರಿದ ಬ್ರಾಹ್ಮಣ. ಅವನ ಸ್ವಂತ ಊರು ಸುಳ್ಯದ ಬಳಿ ಅಜ್ಜಾವರ. ಸುಳ್ಯದಲ್ಲಿ ಅವನ ಸಮೀಪದ ಬಂಧು ಶಂಕರನಾರಾಯಣ ಶಾನುಭಾಗನಾಗಿದ್ದ. ಸುಳ್ಯದ ಸುತ್ತಮುತ್ತಲಿನ ಮತ್ತು ಕನ್ನಡ ಜಿಲ್ಲೆಯ ಇತರ ಮಾಗಣೆಗಳಲ್ಲೂ ಅವನ ಜಾತಿಯ ಸಂಬಂಧಿಕರೇ ಶಾನುಭಾಗರಾಗಿದ್ದರು ಮತ್ತು ದೇವಾಲಯಗಳ ಧರ್ಮಾಧಿಕಾರಿಗಳಾಗಿದ್ದರು. ಹೀಗಾಗಿ ಲಕ್ಷ್ಮೀನಾರಾಯಣಯ್ಯನಿಗೂ ಅಳಿಯ ಕರಣಿಕ ಸುಬ್ಬಯ್ಯನಿಗೂ ಕನ್ನಡ ಜಿಲ್ಲೆಯ ಸಂಬಂಧಿಗಳೊಡನೆ ದಂಗೆಯ ರೂಪರೇಖೆಯನ್ನು ವಿವರಿಸಿ ಅವರು ವಹಿಸಬೇಕಾದ ಪಾತ್ರದ ಕುರಿತು ನಿರ್ದೇಶನ ಮಾಡುವುದು ಸುಲಭಸಾಧ್ಯವಾಯಿತು. ಕೊಡಗಿನ ರಾಜನು ತನ್ನ ಅಪಾರ ಸೈನ್ಯದೊಡನೆ ಬರುವನು, ಬ್ರಿಟಿಷರ ರಾಜ್ಯಭಾರವು ಮುಕ್ತಾಯವಾಗುವುದು, ತೆರಿಗೆಗಳ ಹೊರೆಯು ನೀಗಿ ಎಲ್ಲರೂ ಸಂತೋಷದಲ್ಲಿ ಬಾಳಲು ಸಾಧ್ಯವಾಗುವುದೆಂಬ ಹರ್ಷದಾಯಕ ವಾರ್ತೆ ಹಳ್ಳಿಹಳ್ಳಿಗಳಲ್ಲಿ ಪ್ರತಿಗುಡಿಸಲಲ್ಲೂ ಹರಡಿತು. ಕಲ್ಯಾಣ ಸ್ವಾಮಿಯ ದಂಡುಗಳನ್ನು ಸ್ವಾಗತಿಸಲು ಜನತೆ ತುದಿಗಾಲ ಮೇಲೆ ನಿಂತಿತು. ಸುಳ್ಯದಲ್ಲಿ ರಾಮಯ್ಯ ಗೌಡನ ನೇತೃತ್ವದಲ್ಲಿ ಗೌಡ ಸಮುದಾಯವು ಬ್ರಿಟಿಷರನ್ನು ಜಿಲ್ಲೆಯಿಂದ ಹೊರ ಓಡಿಸುವ ಪಂಥಾಹ್ವಾನದಲ್ಲಿ ಭಾಗವಹಿಸಲು ನಿರ್ಧರಿಸಿತು. ರಾಜನು ಎದುರಿಗಿದ್ದರೇನೇ ಹೋರಾಟದಲ್ಲಿ ಜನತೆಯ ವಿಶ್ವಾಸ ಬಲಗೊಳ್ಳುವುದು. ಕಲ್ಯಾಣಸ್ವಾಮಿಯ ಬಂಧನದಿಂದಾಗಿ ಜನರ ಮುಂದಿಡಬಹುದಾದ "ಕೊಡಗಿನ ರಾಜ"ನಿರಲಿಲ್ಲ. ದಂಗೆಯ ಏರ್ಪಾಡಂತೂ ಹಿಂದೆ ಬರಲು ಸಾಧ್ಯವಾಗದಷ್ಟು ಮುಂದುವರಿದಿತ್ತು. ಕರಣಿಕ ಸುಬ್ಬಯ್ಯ, ಚೆನ್ನಯ್ಯ ಮತ್ತು ಅವರ ಮಿತ್ರರು ಪುಟ್ಟಬಸಪ್ಪನೆಂಬ ಜಂಗಮನೊಬ್ಬನನ್ನು ಕಲ್ಯಾಣಸ್ವಾಮಿಯ ವೇಷ ಧರಿಸಲು ಹೇಳಿದರು. ಇವನ ವಯಸ್ಸು ಕಲ್ಯಾಣಸ್ವಾಮಿಯಷ್ಟೇ ಇತ್ತು ಮತ್ತು ಕಲ್ಯಾಣಸ್ವಾಮಿಯಂತೆಯೇ ಇವನ ಪರಿಚಯವೂ ಕೊಡಗು, ಅಮರ ಸುಳ್ಯದ ಜನರಿಗಿರಲಿಲ್ಲ. ಕನ್ನಡ ಜಿಲ್ಲೆಯಲ್ಲಿ ಕಲ್ಯಾಣಸ್ವಾಮಿಯ ಬಂಧನವಾದುದೇ ಜನರಿಗೆ ತಿಳಿದಿರಲಿಲ್ಲವಾದುದರಿಂದ ಪುಟ್ಟಬಸಪ್ಪನೇ ಕಲ್ಯಾಣಸ್ವಾಮಿ ಎಂದು ಸ್ವೀಕೃತನಾಗಬಹುದಾಗಿತ್ತು. ಮಾರ್ಚ್ 5ನೇ ತಾರೀಕು ಶಿವರಾತ್ರಿಯ ದಿನ ಕೊಡಗಿನಲ್ಲೂ, ಏಪ್ರಿಲ್ 6ನೇ ತಾರೀಕು ಯುಗಾದಿಯ ದಿನ ಅಮರ ಸುಳ್ಯದಲ್ಲೂ ದಂಗೆ ಏಳುವುದೆಂದು ನಿಶ್ಚಯವಾಯಿತು. ಆದರೆ ಕೊಡಗಿನಲ್ಲಿ ಜನ ಬೆಂಬಲ ಹೆಚ್ಚಿಲ್ಲದಿದ್ದುದರಿಂದಲೋ ಏನೋ, ಬಂಡಾಯವು ಪ್ರಾರಂಭವಾಗಲಿಲ್ಲ.

ಅಮರ ಸುಳ್ಯದಲ್ಲಿ ಯುಗಾದಿಯ 8 ದಿನಗಳ ಮುಂಚಿತವಾಗಿಯೇ ದಂಗೆ ಪ್ರಾರಂಭವಾಯಿತು. ಇದಕ್ಕೆ ಕಾರಣ ಲಕ್ಷ್ಮೀನಾರಾಯಣಯ್ಯನ ತಮ್ಮ ರಾಮಪ್ಪಯ್ಯ. ಇಡೀ ಆಟ್ಲೂರು ಗ್ರಾಮ ರಾಮಪ್ಪಯ್ಯನದಾಗಿತ್ತು. ಅವನು 'ಆಟ್ಲೂರು ದೊರೆ, ಹತ್ತೂರು ಅರಸು' ಎಂದು ಕರೆದುಕೊಂಡು ಅಮರ ಸುಳ್ಯದಲ್ಲಿ ಒಬ್ಬ ದೊರೆಯಂತೆ ಮೆರೆಯುತ್ತಿದ್ದನು. ತನ್ನ ಅಣ್ಣ ಕೊಡಗಿನ ದಿವಾನನಾಗಿದ್ದುದು ಅವನ ಹೆಮ್ಮೆಗೆ ಇನ್ನಷ್ಟು ಒತ್ತಾಸೆ ಕೊಟ್ಟಿತ್ತು. ಅವನ ಅಹಂಭಾವ ದುರ್ವರ್ತನೆಗಳಿಂದಾಗಿ ರಾಮಪ್ಪಯ್ಯನಿಗೆ ಅನೇಕ ವೈರಿಗಳಿದ್ದರು; ಅವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲಿತ್ತು. ತನ್ಮಧ್ಯೆ ದಂಗೆಗೆ ಸೇರಬೇಕೆಂದು ಲಕ್ಷ್ಮೀನಾರಾಯಣಯ್ಯನು ಪತ್ರ ಬರೆದಿದ್ದರೂ ಅವನಿಗಾಗಲೀ, ದಂಗೆಯ ಇತರ ನಾಯಕರಿಗಾಗಲೀ ಏನೊಂದು ಸ್ಪಷ್ಟವಾದ ಉತ್ತರವನ್ನೂ ರಾಮಪ್ಪಯ್ಯನು ಹೇಳಿರಲಿಲ್ಲ. ಇದರಿಂದಾಗಿ ಜನರಿಗೆ, ಎಲ್ಲಿ ರಾಮಪ್ಪಯ್ಯನು ತಿರುಗಿ ಬೀಳುವನೋ ಎಂಬ ಭಯವಿತ್ತು. ತನ್ನ ವಿರೋಧಿಗಳು ಕೂಡಾ ದಂಗೆಯಲ್ಲಿ ಪಾಲ್ಗೊಂಡಿರುವರು ಎಂದು ರಾಮಪ್ಪಯ್ಯನಿಗೆ ಗೊತ್ತಾಯಿತು. ಅವರನ್ನು ಬೆದರಿಸಲು ತಾನು ಅವರ

ಒಳಸಂಚಿನ ವಿಷಯವನ್ನು ಮಂಗಳೂರಿನ ಕಲೆಕ್ಟರನಿಗೆ ತಿಳಿಸುವೆನು ಎಂದು ರಾಮಪ್ಪಯ್ಯ ಹೇಳಿದನು. ಇದರಿಂದ ರಾಮಪ್ಪಯ್ಯನನ್ನು ಬೇಗನೆ ಕೊಂದು ದಂಗೆಯನ್ನು ಆರಂಭಿಸಲು ಅವನ ವಿರೋಧಿಗಳು ನಿರ್ಧರಿಸಿದರು. ರಾಮಪ್ಪಯ್ಯನ ಪತನವು ಕಂಪೆನಿ ಸರಕಾರದ ಆಳ್ವಿಕೆಗೆ ಸಾಮಾನ್ಯ ರೈತರು ಎದುರು ಬೀಳಲು ಪ್ರೋತ್ಸಾಹದಾಯಕವಾಯಿತು; ಪುಟ್ಟಬಸಪ್ಪನಿಗೆ ತಾನು 'ಕಲ್ಯಾಣಸ್ವಾಮಿ, ಕೊಡಗಿನ ದೊರೆ' ಎಂದು ಸಾರಿಕೊಳ್ಳಲು ತಕ್ಕ ಅವಕಾಶ ಉಂಟಾಯಿತು. ಹೀಗೆ ರಾಮಪ್ಪಯ್ಯನ ಮರಣ ಬಂಡಾಯದ ನಾಂದಿಯಾಯಿತು.

ಸುಳ್ಯದಿಂದ ಕಲ್ಯಾಣಸ್ವಾಮಿಯ ಸೈನ್ಯಗಳು ಬೆಳ್ಳಾರೆಗೆ ಹೋಗಿ ಅದನ್ನು ವಶಪಡಿಸಿಕೊಂಡುವು. ಇಲ್ಲಿ ಕೂಜುಗೋಡು ಸೋದರರಾದ ಮಲ್ಲಪ್ಪ ಗೌಡ ಮತ್ತು ಅಪ್ಪಯ್ಯ ಇವರು ತಮ್ಮ ವರ್ಚಸ್ಸಿನಿಂದ 200 ಮಂದಿಯನ್ನು ಸೇರಿಸಿ ಕದನದಲ್ಲಿ ಸಹಾಯ ಮಾಡಿದರು. ಅಲ್ಲಿಂದ "ರಾಜ ಭಕ್ತಿಯುಳ್ಳ ತನ್ನ ಪ್ರಜೆಗಳೆಲ್ಲರೂ ಆಯುಧ ಸಹಿತರಾಗಿ ಅಲ್ಲಿಗೆ ಬಂದು ನನ್ನನ್ನು ಸೇರಬೇಕು" ಎಂದು ಇಸ್ತಿಹಾರುಗಳನ್ನು ಕಲ್ಯಾಣಸ್ವಾಮಿ ಹೊರಡಿಸಿದನು. ಭೂಕಂದಾಯವನ್ನು ಮೂರು ವರ್ಷಗಳ ತನಕ ಎತ್ತುವುದಿಲ್ಲವೆಂದೂ, ಉಪ್ಪು, ಹೊಗೆಸೊಪ್ಪು ಮಾರಾಟದ ಗುತ್ತಿಗೆಯನ್ನು ತೆಗೆದುಬಿಡುವುದಾಗಿಯೂ ಕಲ್ಯಾಣಸ್ವಾಮಿ ಮತ್ತು ಅವನ ಸ್ನೇಹಿತರು ಘೋಷಿಸಿದರು. ಪುತ್ತೂರು, ಪಾಣೆಮಂಗಳೂರು, ಬಂಟ್ವಾಳ ಮಾರ್ಗವಾಗಿ, ಬೆಳ್ಳಾರೆಯಿಂದ ಹೊರಟು ಏಳು ದಿನಗಳಲ್ಲಿ, ಏಪ್ರಿಲ್ ಐದರಂದು, ಕಲ್ಯಾಣಸ್ವಾಮಿಯ ಸೈನ್ಯವು ಮಂಗಳೂರಿಗೆ ತಲುಪಿತು. ಪಾಣೆಮಂಗಳೂರಿನಲ್ಲಿ ನಂದಾವರದ ಲಕ್ಷ್ಮಪ್ಪ ಬಂಗರಸನು ದಂಗೆಗೆ ಸೇರಿದನು. ಹೋದಲ್ಲೆಲ್ಲಾ ಈ ಸ್ವಾತಂತ್ರ್ಯದ ತುಕಡಿಗಳಿಗೆ ಜನರ ಸಂಭ್ರಮದ ಸ್ವಾಗತವು ದೊರಕಿತು. ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನ ತೆಂಕಣ ದಿಕ್ಕಿನಲ್ಲಿರುವ ಎಲ್ಲಾ ಭಾಗಗಳೂ ಸ್ವತಂತ್ರವಾದುವು. ಕಲೆಕ್ಟರ್ ಲುಯಿಸ್ ಪಲಾಯನ ಸೂತ್ರವನ್ನು ಪಠಿಸಿದನು.

ಇದಾದ ಐದು ದಿನಗಳೊಳಗೆ ತಲಚೇರಿಯಿಂದ ಮತ್ತು ಬೆಂಗಳೂರಿನಿಂದ ಹೊರಟ ಎರಡು ದಂಡುಗಳು ಮಂಗಳೂರನ್ನು ತಲುಪಿದುವು. ಇವು ಕಲ್ಯಾಣಸ್ವಾಮಿಯ ಸೈನ್ಯಗಳನ್ನು ಚದುರಿಸಿದುವು. ಕಲ್ಯಾಣಸ್ವಾಮಿ ಮತ್ತಿತರ ಮುಖಂಡರು ತಲೆಮರೆಸಿಕೊಂಡರು.

ಇತ್ತ ಕೊಡಗಿನಲ್ಲಿ ತಾವುನಾಡು, ಬೇಂಗು ನಾಡು ಮತ್ತು ನಾಲ್ಕು ನಾಡುಗಳ ಜನರು 'ಹಿಂದಿನ ರಾಜನು ಸುಳ್ಯಕ್ಕೆ ಬಂದಿರುವನು, ಭಾರತದಲ್ಲೆಲ್ಲಾ ಬ್ರಿಟಿಷರ ಆಳ್ವಿಕೆ ನಿಂತುಹೋಯಿತು' ಎಂದು ಕೇಳಿ ದಂಗೆಗೆ ಸೇರಲೇ ಬೇಡವೇ ಎಂದು ಚಂಚಲಚಿತ್ತರಾಗಿದ್ದರು. ಇದೇ ಸಮಯದಲ್ಲಿ ಗುಡ್ಡೆಮನೆ ಅಪ್ಪಯ್ಯ ತಾನು ವೀರ ರಾಜನನ್ನು ಸುಳ್ಯದಲ್ಲಿ ಸ್ವತಃ ಕಂಡಿರುವೆನೆಂದು ಹೇಳಿದನು. ಇದನ್ನು ಕೇಳಿ ಈ ನಾಡುಗಳ ಜನರು ಬ್ರಿಟಿಷರ ವಿರುದ್ಧ ದಂಗೆ ಎದ್ದರು. ಗುಡ್ಡೆ ಮನೆ ಅಪ್ಪಯ್ಯನು ಎಡೆನಾಡು ಗಡಿನಾಡುಗಳ ಜನರನ್ನು ಹೀಗೆಯೇ ಹುರಿದುಂಬಿಸಿ ಸ್ವಾತಂತ್ರ್ಯದ ಹೋರಾಟದಲ್ಲಿ ಧುಮುಕುವಂತೆ ಮಾಡಿದನು. ಬಿಸಿಲೆಘಟ್ಟದ ಕಡೆಯಿಂದ ಸುಮಾರು 150 ಜನ ಕನ್ನಡಿಗರೂ ಬಂದು ಸೇರಲಾಗಿ ಸುಮಾರು 1,000–1,500 ಜನರೊಡನೆ ಅಪ್ಪಯ್ಯನು ಉತ್ತರದಿಂದ ಮಡಿಕೇರಿಯನ್ನು ಆಕ್ರಮಿಸಿದನು. ಇದೇ ಸಮಯದಲ್ಲಿ ತಾವು ನಾಡಿನವರು ಇತರರೊಡನೆ ದಕ್ಷಿಣದಿಂದಲೂ, ಅಮರ ಸುಳ್ಯದವರು ಪಶ್ಚಿಮದಿಂದಲೂ ಮಡಿಕೇರಿಯನ್ನು ಮುತ್ತಬೇಕು ಎಂದು ಏರ್ಪಾಡಾಗಿತ್ತು. ಆದರೆ ಬೋಪು ದಿವಾನನು ಕಲ್ಯಾಣಸ್ವಾಮಿಯು ಅಪ್ಪಾಜಿ ಅರಸನ ಮಗನಲ್ಲವೆಂದು ಮುಂತಾಗಿ ಹೇಳಿ ದಕ್ಷಿಣ ಭಾಗದ ಜನರು ದಂಗೆಗೆ ಸೇರದಂತೆ ಮಾಡಿದನು. ಇದನ್ನು ತಿಳಿದು ಗುಡ್ಡೆಮನೆ ಅಪ್ಪಯ್ಯನ ಜನರು ಏಪ್ರಿಲ್ 17ಕ್ಕೆ ಹಾರ್ಡಿಗೆ ಶರಣಾಗತರಾದರು. ಹೀಗೆ ಕೊಡಗಿನಲ್ಲಿ ದಂಗೆ ಏಳಲಿಲ್ಲ.

ಅಮರ ಸುಳ್ಯದ ಬಂಡಾಯದಲ್ಲಿ ಬೋಪುವಿನ ಅನೇಕ ಸಂಬಂಧಿಕರೂ ನಾಡಿನವರೂ ಸೇರಿಕೊಂಡಿದ್ದರು. ಆದರೂ ಲೀ ಹಾರ್ಡಿಯು ಬೋಪುವಿನ ಮೇಲೆ ನಂಬಿಕೆ ಇಟ್ಟು ಅವನ ಆಪ್ತರ ಒಂದು ಸೈನ್ಯವನ್ನು ಸುಳ್ಯದ ಕಡೆಗೆ ಕಳುಹಿಸಿದನು. ಬೋಪುವು ಸವಿ ಮಾತುಗಳನ್ನಾಡಿ ಬಂಡುಗಾರರಲ್ಲಿ ಸೇರಿದ್ದ ತನ್ನ ಸಂಬಂಧಿಕರನ್ನು ತನ್ನ ಪಕ್ಷಕ್ಕೆ ಸೇರಿಸಿಕೊಂಡನು. ಇದರಿಂದ ಬಂಡುಗಾರರ ತುಕಡಿಗಳು ಚೆಲ್ಲಾಪಿಲ್ಲಿಯಾದುವು. ಬೋಪುವು ಸುಲಭದಲ್ಲಿ ಏಪ್ರಿಲ್ 24ರಂದು ಸುಳ್ಯವನ್ನು ವಶಪಡಿಸಿಕೊಂಡನು. ಅಷ್ಟರಲ್ಲಿ ಬ್ರಿಟಿಷ್ ಸೈನ್ಯಗಳು ಸುಳ್ಯಕ್ಕೆ ತಲುಪಿದುವು. ಬರೇ 7 ದಿನಗಳಲ್ಲಿ ಕಲ್ಯಾಣಸ್ವಾಮಿಯ ದಂಡುಗಳು ಸುಳ್ಯದಿಂದ ಮಂಗಳೂರಿನವರೆಗೆ ಇರುವ ಎಲ್ಲಾ ಪ್ರದೇಶಗಳನ್ನೂ ಸ್ವತಂತ್ರ ಮಾಡಿದ್ದರೆ ಬ್ರಿಟಿಷ್ ದಂಡುಗಳಿಗೆ ಮಂಗಳೂರಿನಿಂದ ಸುಳ್ಯದವರೆಗಿರುವ ಪ್ರದೇಶಗಳನ್ನು ಪುನರಾಕ್ರಮಿಸಲು 14 ದಿನಗಳು ಬೇಕಾದುವು.

ಪುಟ್ಟಬಸಪ್ಪನನ್ನು ಹಿಡಿದುಕೊಟ್ಟವರಿಗೆ 10,000 ರೂಪಾಯಿ, ಕರಣಿಪ ಸುಬ್ಬಯ್ಯ ಮತ್ತು ಕುಕ್ಕನೂರು ಚೆನ್ನಯ್ಯ ಇವರನ್ನು ಹಿಡಿದುಕೊಟ್ಟವರಿಗೆ ಐದೈದು ಸಾವಿರ ರೂಪಾಯಿ ಬಹುಮಾನ ಕೊಡುವುದಾಗಿ ಕಂಪೆನಿ ಸರಕಾರವು ಸಾರಿತು.

ಗುಡ್ಡೆಮನೆ ಅಪ್ಪಯ್ಯ ಮುಂತಾದವರು ಈಗಾಗಲೇ ಸೆರೆಯಲ್ಲಿದ್ದರು. ಲಕ್ಷ್ಮಪ್ಪ ಬಂಗರಸ, ಪುಟ್ಟಬಸಪ್ಪ ಮತ್ತು ಇತರ ಮುಖಂಡರನ್ನು ಬ್ರಿಟಿಷರು ಹೇಗಾದರೂ ಮೇ 13ರೊಳಗೆ ಬಂಧಿಸಿ ಸೈನಿಕ ವಿಚಾರಣೆ ನಡೆಸಿದರು. ಈ ಮುಖಂಡರಿಗೆ ಮಂಗಳೂರಿನ ಬಿಕ್ರನಕಟ್ಟೆಯಲ್ಲಿ ಗಲ್ಲಾಯಿತು. ಕೆಲವರಿಗೆ ದ್ವೀಪಾಂತರ ಶಿಕ್ಷೆಯಾಗಿ ಭಾರತದ ಹೊರಗೆ ಕಳುಹಿಸಲ್ಪಟ್ಟರು. ಉಳಿದವರಿಗೆ ಸಶ್ರಮ (ಅನೇಕರಿಗೆ ಆಜೀವ ಬಂಧನ) ಶಿಕ್ಷೆಯಾಯಿತು.

ಹೀಗೆ, ಭದ್ರವಾಗಿ ನಿಂತಿದೆ ಎಂದು ಭಾವಿಸಲಾದ ಬ್ರಿಟಿಷ್ ಆಡಳಿತ ವೃಕ್ಷವನ್ನು ಕೆಲವು ಕಾಲಕ್ಕಾದರೂ ಅಲುಗಾಡಿಸಿತು ಕಲ್ಯಾಣಸ್ವಾಮಿಯ ಬಂಡಾಯ. ದಂಗೆಯು ವಿಫಲವಾದುದು ಸ್ಥಾನಿಕ ಬ್ರಾಹ್ಮಣ ವರ್ಗಕ್ಕೆ ದೊಡ್ಡ ಆಘಾತವಾಯಿತು. 95

ಸ್ಥಾನಿಕ ಶಾನುಭೋಗರು ತಮ್ಮ ವೃತ್ತಿಯಿಂದ ವಜಾ ಆದರು. 1844–45ರಲ್ಲಿ ದೇವಾಲಯಗಳ ಮೇಲಿನ ಅವರ ವಂಶ ಪಾರಂಪರ್ಯ ಹಕ್ಕನ್ನು ಕಂಪೆನಿ ಸರಕಾರವು ಮನ್ನಾ ಮಾಡಿತು.

ಕೊಡಗಿನ ಹಾಗೂ ಕನ್ನಡ ಜಿಲ್ಲೆಯ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುತ್ತಲಿದ್ದ ಲಿಂಗಾಯತರು ದಂಗೆಯ ನಂತರ ಆರ್ಥಿಕವಾಗಿ, ಸಾಮಾಜಿಕವಾಗಿ ಅವನತಿ ಹೊಂದಿದರು. ಗೌಡರು ಎಷ್ಟರ ಮಟ್ಟಿಗೆ ಹಿಂದೆ ಬಿದ್ದರೆಂದರೆ ಹಿಂದುಳಿದ ವರ್ಗಗಳಲ್ಲಿ ಅವರು ಸೇರಿಹೋದರು.

ಮೈಸೂರು – ಕೊಡಗು, ಲಿಂಗಾಯತ ಅರಸು – ಕೊಡಗು ಸರದಾರರು ಈ ಭೇದ ಬೆಳಸಿ ತಮ್ಮ ಪ್ರಭಾವವನ್ನು ನೆಲೆ ಗೊಳಿಸಿದ್ದ ಕಂಪೆನಿ ಸರಕಾರವು ಪ್ರಾಯಶಃ 5–6 ಶತಮಾನಗಳಿಂದ ಬೆಳೆದು ಬಂದ ಒಂದು ತಿಕ್ಕಾಟವನ್ನು ಇನ್ನಷ್ಟು ಹೆಚ್ಚಿಸಿ ಕನ್ನಡಜಿಲ್ಲೆಯಲ್ಲಿ ತನ್ನ ವಿರೋಧವಾಗಿದ್ದ ವರ್ಚಸ್ವೀ ಜನವಿಭಾಗವೊಂದನ್ನು ದಮನಗೊಳಿಸಲು ಶಕ್ತವಾಯಿತು. ಹೇಗಿದ್ದರೂ ಒಂದೇ ಸಿಂಹಾಸನಕ್ಕೆ ಮೂವರು ರಾಜ್ಯಾಭಿಯೋಗಗಳು ಒಬ್ಬರ ನಂತರ ಒಬ್ಬರಾಗಿ ಬಂದ ಸನ್ನಿವೇಶಕ್ಕೆ ಹಿನ್ನೆಲೆ ಒದಗಿಸಿದ ಶಕ್ತಿಯು ಸಂಶೋಧನಯೋಗ್ಯವಾದುದು. (ವಿವರ–ಯುಗಾದಿ 1964ರ 'ವೀರಭೂಮಿಯ'ಲ್ಲಿ ಪ್ರಕಟವಾದ ನನ್ನ ಲೇಖನ).

**ಅನುಬಂಧ**

1 ದಿವಾನ ಲಕ್ಷ್ಮೀನಾರಾಯಣಯ್ಯನು ದಂಗೆಯಲ್ಲಿ ಭಾಗವಹಿಸಿದನೆಂದು ಯಾವ ಚರಿತ್ರೆಗಾರನೂ ಹೇಳುವುದಿಲ್ಲ. ಆದರೆ ಅವನ ಅಳಿಯ ಭಾವಂದಿರು ಮತ್ತು ಅಮರಸುಳ್ಯದ ಅವನ ಅನೇಕ ಬಂಧುಗಳು ಸೇರಿದ್ದ ಈ ದಂಗೆಯಲ್ಲಿ ಅವನ ಸಲಹೆ ಯನ್ನು ದಂಗೆಕಾರರು ತೆಗೆದುಕೊಂಡಿಲ್ಲ ಎಂದು ತಿಳಿದರೆ ತಪ್ಪಾಗುವುದು. ದಿವಾನ ಲಕ್ಷೀನಾರಾಯಣಯ್ಯನ ದಿನಚರಿಯಲ್ಲಿ ಅಮರ ಸುಳ್ಯದ ಬೇರೆ ಬೇರೆ ಭಾಗಗಳ ಗೌಡರಿಗೆ ಏನನ್ನೋ ಗುಪ್ತವಾದುದನ್ನು ಕಳುಹಿಸಿದ ವರ್ತಮಾನ ದೊರಕುತ್ತದೆ. (ಈ ದಿನಚರಿ ಯನ್ನು ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ವಿ. ರಮಣರವರು ಮದ್ರಾಸಿನ ಸರಕಾರಕ್ಕೆ ಒಪ್ಪಿಸಿದರೆಂದು ಅದು ಚಾರಿತ್ರಿಕ ದಾಖಲೆಗಳನ್ನು ಸಂಗ್ರಹಿಸುತ್ತಿದ್ದ ವರ್ಷದಲ್ಲಿ ತಿಳಿದುಬರುತ್ತದೆ. ಲಕ್ಷ್ಮೀನಾರಾಯಣಯ್ಯನು ಚಿಕ್ಕವೀರರಾಜೇಂದ್ರನನ್ನು ಚಿಕ್ಕಂದಿನಲ್ಲಿ ಲಾಲನೆ ಪಾಲನೆ ಮಾಡಿದವನಿದ್ದು ಅವನು ದೇಶಾಂತರಗೊಂಡುದು ದಿವಾನನಿಗೆ ಬೇಸರ ತಂದಿತ್ತೆಂದು ಕೇಳಿದ್ದೇನೆ.) ಇದು ದಂಗೆ ಯನ್ನು ಸೇರಬೇಕೆಂಬ ವಿನಂತಿಪತ್ರಗಳು ಇಲ್ಲವೆ ದಂಗೆಗೆ ಸಂಬಂಧಪಟ್ಟ ದಿಗ್ದರ್ಶನಗಳೆಂದು ಊಹಿಸಲು ಸಾಧ್ಯವಿದೆ.

ದಿವಾನನ ಅಳಿಯ ಕರಣಿಕ ಸುಬ್ಬಯ್ಯನು ಕನ್ನಡ ಜಿಲ್ಲೆಯ ಸ್ವಬಾಂಧವರನ್ನು ದಂಗೆಗೆ ಸೇರಿದಂತೆ ಮಾಡಿದವನಿರಬಹುದು. ಬಂಡಾಯಗಾರರ ಕರಣಿಕನಾಗಿದ್ದು ಬರಹದ ಮೂಲಕ ಬಂಡಾಯದ ಪ್ರಚಾರವನ್ನು ಮಾಡಿದ. ಕೊನೆಯ ತನಕವೂ ಕಲ್ಯಾಣ ಸ್ವಾಮಿಯ ಜೊತೆಗಿದ್ದು ಕೊನೆಗೆ ಬೋಪು ದಿವಾನನ ಕೈಗೆ ಸಿಕ್ಕಿದ. ದಂಗೆಗಾರರಲ್ಲಿ ಪ್ರಮುಖನಾಗಿದ್ದ ಚೆನ್ನಯ್ಯನು ಕಲ್ಯಾಣ ಸ್ವಾಮಿಯ ಮುನ್ಷಿಯಾಗಿ ಅವನ ನಿರೂಪಗಳನ್ನು ಬರೆಯುತ್ತಿದ್ದ. ಇವನಿಗೆ ಮರಣದಂಡನೆ ವಿಧಿಸಲಾಯಿತು. ಹೇಗೋ ಅವನ ಜೀವ ಉಳಿದು ಶಿಕ್ಷೆಯಾಯಿತು. ದಿವಾನನ ಭಾವ ಕೃಷ್ಣನು ಕೊಡಗಿನಲ್ಲಿ ದೇವಾಲಯದ ಅರ್ಚಕನಾಗಿದ್ದರೂ "ಕಾರಬಾರ ಸುಬೇದಾರ" ಎನ್ನಿಸಿಕೊಂಡವನು. ಬಂಡಾಯದ ಕಾಲದಲ್ಲಿ ಎಲ್ಲ ವ್ಯವಸ್ಥೆಗೂ ಆಡಳಿತೆಗೂ ಇವನೇ ಕಾರಣ. ಸುಳ್ಯದ ಬಳಿ ಬೋಪು ದಿವಾನನ ಕೈಗೆ ಒಂದು ಹೋರಾಟದಲ್ಲಿ ಸಿಕ್ಕಿಬಿದ್ದು ಆಜೀವ ಶಿಕ್ಷೆಗೆ ಗುರಿಯಾದ.

2 ಸ್ಥಾನಿಕ ಬ್ರಾಹ್ಮಣರ ಮೋರಜ ಮನೆತನದವರು ದಂಗೆಯಲ್ಲಿ ದೊಡ್ಡ ನಾಯಕರಾಗಿದ್ದರಂತೆ. ಅವರು ತಮ್ಮ ಸಂಬಂಧಿಗಳಾದ ಪುತ್ತೂರಿನ ಮಹಾಲಿಂಗೇಶ್ವರ ದೇವಸ್ಥಾನದ ಹಿಂದಿನ ಸ್ಥಾನಿಕರಾದ ನಟ್ಟೋಜ–ಶ್ಯಾರ ಮನೆಗೆ ಹೋಗಿ "ಕೊಡಗಿನ ರಾಜರು ಬಂದಿರುವರು. ಅವರ ಪರಿವಾರಕ್ಕೆ 50 ಸೀಯಾಳಗಳನ್ನು ಒದಗಿಸಬೇಕು" ಎಂದರಂತೆ. ಸೀಯಾಳಗಳು ಬಂದುವು. ಕಲ್ಯಾಣಸ್ವಾಮಿಯು ಸಿಹಿಯಾದ ಎಳನೀರನ್ನು ಕುಡಿದನಂತರ ಸೀಯಾಳವನ್ನು ಒಡೆಯಿಸಿ ತಿರುಳನ್ನು ತಿನ್ನಲಾರಂಭಿಸಿ ದನಂತೆ. ಆಗ ನಟ್ಟೋಜ-ಶ್ಯಾರ ಮನೆಯವರು ಮೋರಜರೊಡನೆ ಹೇಳಿದರಂತೆ – "ಮೂರ್ಖನೆಂದರೆ ನೀನು. ಇಲ್ಲವಾದರೆ ರಾಜಗಾಂಭೀರ್ಯವಿಲ್ಲದವರೊಡನೆ ಬರುತ್ತಿದ್ದಿಯಾ? ಸೀಯಾಳ ಕುಡಿದನಂತರ ಅದನ್ನು ಬಿಸಾಡುವುದು ಬಿಟ್ಟು ತಿನ್ನುವುದು ರಾಜ ಯೋಗ್ಯವೇ?"